ದಿನಾಂಕಃ **07.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎನ್.ವಿ ರವರಿಂದಃ

ನಾನು **3**ನೇ ಸೈಟ್‌ಗೆ ಸಂಬಂಧಿಸಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತು ಸರ್ವೆ ನಂ.**402/65** ಜಮೀನಿನಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ದಾವಾ ಸ್ವತ್ತು ಸರ್ವೆ ನಂ.**402/65** ಜಮೀನಿನಲ್ಲಿ ಉಂಟಾಗುತ್ತದೆ ಎಂದು ತೋರಿಸಲು ಸಂಬಂಧಿತ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತು ನನಗೆ ನನ್ನ ಸಹೋದರಿ ಯಿಂದ ರಿಜಿಸ್ಟರ್ ಪತ್ರದ ಮೂಲಕ ನನಗೆ ಬಂದಿರುತ್ತದೆ. ದಾವಾ ಸ್ವತ್ತಿಗೆ ಸಂಬಂಧಿಸಿದ ನೊಂದಾಯಿತ ಪತ್ರವನ್ನು ನನ್ನ ಸಹೋದರಿ ನನ್ನ ಹೆಸರಿಗೆ ನೊಂದಾವಣೆ ಮಾಡುವ ದಿನದಂದೆ ನನ್ನ ಸಹೋದರಿಯು ನನ್ನ ತಮ್ಮ ರಜತ್ ಮತ್ತು ನನ್ನ ತಂಗಿ ಮಂಜುಳ.ಎನ್ ತಲಾ ಒಂದೊಂದು ನೊಂದಾವಣೆ ಪತ್ರವನ್ನು ಮಾಡಿರುತ್ತಾರೆ. ನನ್ನ ಸಹೋದರಿ ರಮ್ಯ ರವರು **1**ನೇ ಪ್ರತಿವಾದಿ ಸದಾನಂದ ರವರ ವಿರುದ್ದ ಮೂಲ ದಾವೆ ಸಂ. **6695/2006** ರಂತೆ ಒಂದು ಪ್ರಕರಣವನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ರಮ್ಯ ರವರ ವಿರುದ್ದ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರಿ ರಮ್ಯ ರವರಿಗೆ ದಾವಾ ಸ್ವತ್ತು ಸೇರಿದಂತೆ ಒಟ್ಟು **4** ನಿವೇಶನಗಳು ನನ್ನ ತಂದೆ ಕಡೆಯಿಂದ ಬಂದಿರುತ್ತದೆ. ಸದರಿ **4** ಖಾಲಿ ನಿವೇಶನಗಳ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ

ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಸಲ್ಲಿಸಲು ದಾವೆಯ ಮಾಹಿತಿಯನ್ನು ನಾನೇ ನಮ್ಮ ವಕೀಲರಿಗೆ ನೀಡಿರುತ್ತೇನೆ. ದಾವಾ ಎ ಶೆಡ್ಯೂಲ್ ಸ್ವತ್ತಿನ ಉತ್ತರಾಭಿಮುಖವಾಗಿ ಖಾಸಗಿಯವರ ಸ್ವತ್ತು ಎಂದು ಚೆಕ್ಕುಬಂದಿಯನ್ನು ನೀಡಲಾಗಿರುತ್ತದೆ. ಸದರಿ ಖಾಸಗಿಯವರ ಹೆಸರು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಚೆಕ್ಕುಬಂದಿಯನ್ನು ಸಾಬೀತು ಪಡಿಸಲು ನಾನು ಸಂಬಂಧಿತ ಲೇಔಟ್ ಪ್ಲಾನ್ ನ್ನು ಹಾಜರು ಪಡಿಸಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ-**1** ದಾನ ಪತ್ರ ನೊಂದಾವಣೆಗೊಳ್ಳುವ ದಿನದಂದು ನನಗೆ ನನ್ನ ಸಹೋರಿ ರಮ್ಯ ದಾವಾ ಸ್ವತಿಗೆ ಸಂಬಂಧಿಸಿದ ಲೇಔಟ್ **?**ಪ್ಲಾನ್ ಕೊಟ್ಟಿರುವುದಿಲ್ಲ ಸಾಕ್ಷಿಯು ಮುಂದುವರೆದು ಕೊಟ್ಟಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಸೇರಿದಂತೆ ಒಟ್ಟು **4** ಸೈಟ್ ಗೆ ಸಂಬಂಧಿಸಿದ ಖಾತೆಯು ನನ್ನ ಅಕ್ಕ ರಮ್ಯನ ಹೆಸರಿಗೆ ಖಾತೆ ಬಂದಿರುತ್ತದೆ. ಸದರಿ ಖಾತೆಗೆ ಸಂಬಂಧಿಸಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಿಪಿ-**5** ದಾಖಲೆ ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನಾನು ಹಾಜರು ಪಡಿಸಿರುವ ದಾಖಲೆಗಳ ಮಾಹಿತಿ ನನಗೆ ಇರುವುದಿಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕದ ಸೈಟ್ ಗಳಿಗೆ ಸಂಬಂಧಿಸಿದಿ ನನ್ನ ತಮ್ಮ ರಜತ್ ಮತ್ತು ಮಂಜುಳ ರವರು **1**ನೇ ಪ್ರತಿವಾದಿ ಸದಾನಂದ ವಿರುದ್ಧ ಮೂಲ ದಾವೆ ಸಂ.**1405/2016, 1511/2016, 2693/2016** ರೀತಿಯ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಸಹೋದರಿ

ರಮ್ಯ ರವರು **1**ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿದ ದಾವೆಯ ದಾವಾ ಸ್ವತ್ತಿನಲ್ಲಿ ನನ್ನ ಸಹೋದರಿ ಸ್ವಾಧೀನ ಅನುಭವದಲ್ಲಿ ಇರುವುದಿಲ್ಲ ಎಂದು ವಜಾಗೊಂಡಿರುತ್ತದೆ ಎಂದರೆ ಸಾಕ್ಷಿಯು ದಾವೆಯಲ್ಲಿ ಯಾವ ತೀರ್ಪು ಬಂದಿರುತ್ತದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಸೇರಿ ಉಳಿಕೆ ಮಾರು ಸೈಟ್ ಗಳನ್ನು ಒಳಗೊಂಡಂತೆ ನನ್ನ ಸಹೋದರಿ ರಮ್ಯ ರವರು ಸ್ವತ್ತುಗಳ ಹಕ್ಕು ಘೋಷಣೆಗೆ ಕೋರಿ ಮೂಲ ದಾವಾ ಸಂ.**2693/2016** ರೀತಿಯ ದಾವೆಯನ್ನು ಸಲ್ಲಿಸಿರುವ ವಿಷಯ ನನಗೆ ಗೊತ್ತು. ಎಲ್ಲಾ ಪ್ರಕರಣಗಳಲ್ಲಿ ನಮ್ಮ ಎಲ್ಲರಿಗೂ ಒಬ್ಬರೆ ವಕೀಲರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಸೇರಿ ಉಳಿಕೆ **3** ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ನಾನು ಹೇಳುವಂತಹ ಒಟ್ಟು **4** ಸೈಟ್ ಗಳ ಸರ್ವೆ ನಂ.**402/65** ಜಮೀನಿನಲ್ಲಿ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. **4** ಸೈಟ್ ಗಳು ಸರ್ವೆ ನಂ.**402/65** ನೇ ಜಮೀನಿನಲ್ಲಿ ಉಂಟಾಗುತ್ತದೆ ಎಂದು ತೋರಿಸಲು ಸಾಕ್ಷಿಯು ಮುಂದುವರೆದ ಖಾತೆ ಕಂದಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಸರ್ವೆ ನಂ.**42/49** ನೇ ಜಮೀನಿನಲ್ಲಿ ಉಂಟಾಗುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.**42/49** ನೇ ಜಮೀನು ಮೂಲತವಾಗಿ **1**ನೇ ಪ್ರತಿವಾದಿ ರವರ ತಂದೆ ಸದಾನಂದ್ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ಸೇರಿ ಉಳಿಕೆ ಮೂರು ಸೆಎಟ್ ಗಳನ್ನು ಸರ್ವೆ ನಂ.**42/49** ನೇ

ಜಮೀನಿನಲ್ಲಿ ನಿರ್ಮಾಣ ಮಾಡಲಾಗಿರುವುದರಿಂದ ನನಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಯಿಂದ ಕಸೆದುಕೊಳ್ಳಲು ನಾನು ನನ್ನ ತಂಗಿ ರಮ್ಯ, ತಮ್ಮ ರಜತ್, ಮಂಜುಳ ಮತ್ತು ಉಮಾದೇವಿ ರವರು ಪ್ರಯತ್ನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸವತ್ತಿಗೆ ಸಂಬಂಧಿಸಿದ ರಮ್ಯನ ಹೆಸರಿಗೆ ನೊಂದಾವಣೆಗೊಂಡಿರುವ ಕ್ರಯ ಪತ್ರ ಸೃಷ್ಟಿತ ಕ್ರಯ ಪತ್ರ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ತಹೋರಿ ರಮ್ಯ ರವರ ಹೆಸರಿಗೆ ಕ್ರಯ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳು ರಮ್ಯ ರವರ ಹೆಸರಿಗಾಗಲಿ ಅವರ ವಿಕ್ರಯದಾರರ ಹೆಸರಿಗಾಗಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮತ್ತು ಇನ್ನು ಉಳಿಕೆ ಮೂರು ಖಾಲಿ ನಿವೇಶನಗಳು 1ನೇ ಪ್ರತಿವಾದಿಯ ಸ್ವಾಧೀನ ಅನುಭವದಲ್ಲಿ ಇದ್ದು ನಾನಾಗಲಿ, ನನ್ನ ಅಕ್ಕ ರಮ್ಯ ಆಗಲಿ, ನನ್ನ ತಮ್ಮ ರಜತ್ ಹಾಗೂ ಮಂಜುಳ ರವರಾಗಲಿ ಸ್ವಾಧೀನ ಅನುಭವದಲ್ಲಿ ಎಂದಿಗೂ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಗುರುತುಸುವಿಕ್ಕಾಗಿ ದಾವಾ ಸ್ವತಿನ ನಂಬರನ್ನು ನಾನೇ ಸೃಷ್ಟಿಸಿಕೊಂಡು ಸೃಷ್ಟಿತ ಸೈಟ್ ನಂಬರ್ ಆಧಾರದ ಮೇಲೆ ದಾಖಲಾತಿಯನ್ನು ಸಹ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಖಾಲಿ ನಿವೇಶನ ಆಗಿರುತ್ತದೆ ಎಂದರೆ ಸ ರಿ. ನಿಪಿ-4 ದಾಖಲೆಗಳಲ್ಲಿ ಪೆನ್ನಿನ ಮೂಲಕ 1 ರಿಂದ 4 ಎಂದು ಅಂಕಿಗಳನ್ನು

ಬರೆದಿರುವರು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-**4** ದಾಖಲೆಯಲ್ಲಿನ ಉಳಿಕೆ **4** ಪುಟಗಳಲ್ಲಿ ಯಾವುದೇ ಸಂಖ್ಯೆ ಗಳನ್ನು ಬರೆಯಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.